**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ -566/2020**

**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | **ಸರಸ್ವತಿ** |
| ಗಂಡನ ಹೆಸರು | **ಮಂಜುನಾಥ** |
| ವಯಸ್ಸು | **29** |
| ಉದ್ಯೋಗ | **ಗೃಹಿಣಿ** |
| ವಿಳಾಸ | **ಸುಬ್ಬರಾಯಪ್ಪನ ಪಾಳ್ಯ** |

**ದಿನಾಂಕಃ21-03-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-2 ರಿಂದ 5 ರವರು ನಮ್ಮ ಗ್ರಾಮದವರು. 1 ನೇ ಆರೋಪಿಯು ನನ್ನ ಜೊತೆಯಲ್ಲಿ ಕೆಲಸವನ್ನು ಮಾಡುತ್ತಿದ್ದರು ಮತ್ತು ಉಳಿದ ಆರೋಪಿಗಳು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಖಾಸಗಿ ಕೆಲಸದ ನಿಮಿತ್ತ ಪೋ. ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನಿಂದ ಕೆಲವು ದಾಖಲೆಗಳ ಮೇಲೆ ಸಹಿಯನ್ನು ಪಡೆದುಕೊಂಡರು. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ನಿಪಿ-2 ಕ್ಕೆ ಯಾರು ಸಹಿಯನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೋಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ನನಗೆ

ನಿಪಿ-1 ಮತ್ತು 2 ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು ಗೇರು ಪಾಳ್ಯದಲ್ಲಿ ಇರುವ ಕ್ಯಾಷಿಯೋ ಫ್ಯಾಕ್ಟರಿಯಲ್ಲಿ ಸೂಪರ್ ವೈಸರ್ ಆಗಿ ಕೆಲಸ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸುಮಾರು 15 ದಿನಗಳ ಹಿಂದೆ ನೀವು ಕೆಲಸ ಮಾಡುವ ಫ್ಯಾಕ್ಟರಿಯಲ್ಲಿ ಮಧ್ಯಾಹ್ನದ ಊಟದ ಸಮಯದಲ್ಲಿ ನೀವು ಊಟ ಮಾಡಲು ನಿಮ್ಮ ರೆಡ್ ಮೀ ಮೊಬೈಲ್ ನ್ನು ನಿಮ್ಮ ಟೇಬಲ್ ಮೇಲೆ ಇಟ್ಟು ವಾಪಸ್ಸು ಬರುವಷ್ಟರಲಿಲ ನಿಮ್ಮ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ 1 ನೇ ಆರೋಪಿಯು ನಿಮ್ಮ ಮೊಬೈಲ್ ನ್ನು ತೆಗೆದು ಹೊಡೆದು ಹಾಕಿದರು ಮತ್ತು ಅದನ್ನು ನೀವು ಕೇಳಿದಾಗ ಅಕ್ಕಾ ತಪ್ಪಾಯಿತು, ನಾಳೆ ಎಷ್ಟೇ ಆಗಲೀ ಸರಿ ಮಾಡಿಸಿಕೊಡುತ್ತೇನೆ ಎಂದು ಹೇಳಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಂತರ ಮನೆಗೆ ಹೋಗಿ 1 ನೇ ಆರೋಪಿಯು ಅವರ ಅಣ್ಣನ ಕೈಯಲ್ಲಿ ಫೋನ್ ಮಾಡಿಸಿ ಅವರು ಯಾವುದೇ ಮೊಬೈಲ್ ನ್ನು ರಿಪೇರಿ ಮಾಡಿಸಿಕೊಡುವುದಿಲ್ಲ ಮತ್ತು 100 ರೂಪಾಯಿ ಕೊಡುತ್ತೇವೆ ನೀವೆ ಸರಿ ಮಾಡಿಸಿಕೊಳ್ಳಿ ಎಂದು ಹೇಳಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅದಕ್ಕೆ ನೀವು ನೀವೆ ರಿಪೇರಿ ಮಾಡಿಸಿಕೊಡಿ ಎಂದು ಹೇಳಿರುತ್ತೀರಾ, ಆಗ ಅವರು ಇಂದು ಅಥವಾ ನಾಳೆ ಮಾಡಿಸಿಕೊಡುತ್ತೇನೆ ಎಂದು ಮುಂದೂಡುತ್ತಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಂತರ ನಿಮ್ಮ ಫ್ಯಾಕ್ಟರಿಯಲ್ಲಿ 1 ನೇ ಆರೋಪಿಯು ಚೀಟಿ ಹಾಕಿದ್ದು ಆ ಚೀಟಿಯನ್ನು

ನೀವೇ ಎತ್ತಿಕೊಂಡು ಆ ಹಣದಿಂದ ರಿಪೇರಿ ಮಾಡಿಸಿ ಉಳಿದ ಹಣವನ್ನು ಅವರಿಗೆ ಕೊಡುವಂತೆ ಹೇಳಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅದರಂತೆ ನೀವು ರೂ. 10 ಸಾವಿರ ಚೀಟಿ ಹಣವನ್ನು ಎತ್ತಿಕೊಂಡು ಮನೆಗೆ ಬರುತ್ತಿರುವಾಗ 1 ನೇ ಆರೋಪಿಯ ಸ್ನೇಹಿತರಾದ 2 ನೇ ಆರೋಪಿ ಮತ್ತು ಗೋಪಿರವರು ನಿಮ್ಮನ್ನು ಅಡ್ಡ ಹಾಕಿ ಚೀಟಿ ಹಣವನ್ನು ವಾಪಸ್ತು ಕೊಡುವಂತೆ ಗಲಾಟೆ ಮಾಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ನಿಮ್ಮ ಸಹೋದರರಾದ ಚಾಸಾ-4 ಮತ್ತು 5 ರವರಿಗೆ ಕರೆ ಮಾಡಿ ಸದರಿ ವಿಷಯವನಲ್ಲು ತಿಳಿಸಿದ್ದು, ಅವರಿಬ್ಬರು ತಕ್ಷಣ ಅಲ್ಲಿಗೆ ಬಂದು ನಿಮ್ಮನ್ನು ಮನೆಗೆ ಕಳುಹಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅವರು ಚಾಸಾ-4 ಮತ್ತು 5 ರವರಿಗೆ ಬಾಯಿಗೆ ಬಂದಂತೆ ಬೈದು ತಳ್ಳಾಡಿ ಗಲಾಟೆ ಮಾಡಿ ಕಳುಹಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ದಿ.07-11-2017 ರಂದು ಮಧ್ಯಾಹ್ನ ಸುಮಾರು 1 ಗಂಟೆ ಸಮಯದಲ್ಲಿ ನಿಮ್ಮ ಮನೆಯಲ್ಲಿ ಎಲ್ಲರೂ ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ 1 ನೇ ಆರೋಪಿಯು ಮತ್ತು ಆತನ ಜೊತೆಯಲ್ಲಿ ಸುಮಾರು 6 ಜನ ಹುಡುಗರು ಅಕ್ರಮವಾಗಿ ಗುಂಪು ಕಟ್ಟಿಕೊಂಡು 3 ಬೈಕ್ ಗಳಲ್ಲಿ ನಿಮ್ಮ ಮನೆಯ ಬಳಿ ಬಂದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಮನೆಯ ಬೀಗವನ್ನು ಲಾಂಗ್‌ಗಳಿಂದ ಹೊಡೆದು ನಿಮ್ಮ ಮನೆಯ ಒಳಗೆ ನುಗ್ಗಿ ಟಿ. ವಿ, ಫ್ರಿಡ್ಜ್ , ಬೀರು ಹಾಗೂ ಇತರೇ ಸಾಮಾನುಗಳನ್ನು ಹೊಡೆದು ಹಾಕಿ ನಂತರ ಹೊರಗೆ ಬಂದು ಚಾಸಾ-2 ರವರು ರಸ್ತೆಯಲ್ಲಿ ಬರುತ್ತಿದ್ದಾಗ, ಚಾಸಾ-4 ರವರು ಎಲ್ಲಿ ಇದ್ದಾರೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಲಾಂಗ್ ನ್ನು ಉಲ್ಟ ಹಿಡಿದುಕೊಂಡು ಕಾಲಿಗೆ, ಕೈಗೆ ತಲೆಗೆ ಹಾಗೂ ಬೆನ್ನಿಗೆ 1 ಮತ್ತು 2 ನೇ ಆರೋಪಿಗಳು ಹೊಡೆದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಜಗಳ ಬಿಡಿಸಲು ಬಂದ ಚಾಸಾ-3 ರವರಿಗೂ ಸಹ ಲಾಂಗ್ ನ್ನು ಉಲ್ಟ ಹಿಡಿದುಕೊಂಡು

ಹೊಡೆದು ಚಾಸಾ-2 ರವರ ಯಮಹಾ ಅಲ್ಫಾ ಗಾಡಿ ಮತ್ತು ಚಾಸಾ-3 ರವರ ಪ್ಯಾಷನ್ ಪ್ಲೆಸ್ ಬೈಕ್ ಗಳನ್ನು ಲಾಂಗ್ ನಿಂದ ಹೊಡೆದು ಹಾಕಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆಗ ನಿಮ್ಮನ್ನು, ಚಾಸಾ-4 5 ರವರನ್ನು ಸುಮ್ಮನೆ ಬಿಡುವುದಿಲ್ಲ ಅವರಿಗೆ ಒಂದು ಗತಿ ಕಾಣಿಸುತ್ತೇವೆ ಎಂದು ಹೇಳಿ ಗಲಾಟೆ ಮಾಡುತ್ತಿದ್ದಾಗ, ಊರಿನ ಜನರು ಸೇರುವಷ್ಟರಲಿಲ ಅವರೆಲ್ಲರೂ ಓಡಿ ಹೋದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ.07-11-2017 ರಂದು ನಿಪಿ-1 ರಂತೆ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ನಿಪಿ-1 ರ ಆಧಾರದ ಮೇಲೆ ಅದೇ ದಿನದಂದು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ನೀವು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-4, 6 ಮತ್ತು 7 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಗಾಜಿನ ಚೂರು ಮತ್ತು ಒಂದು ಕಬ್ಬಿಣದ ಕೊಳವೆ ಮಚ್ಚನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಸಾಕ್ಷಿಗೆ ತಾನು ನೀಡಿರುವ ಮರು ಹೇಳಿಕೆಯ ಭಾಗವಾದ "ನಾನು ಮೇಲ್ಕಂಡ ವಿಳಾಸದಲ್ಲಿ –---------------ಕ್ರಮ ಜರುಗಿಸಬೇಕೆಂದು ಕೋರುತ್ತೇನೆ "ಓದಿ ತಿಳಿಸಲಾಯಿತು. ಸಾಕ್ಷಿಯು ತಾನು ನೀಡಿರುವ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಜಿ. ಆರ್. ಎಸ್ ಮತ್ತು ಶ್ರೀ. ಎಂ. ಎಂ , ವಕೀಲರಿಂದಃ-**

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**